# ಮುಖ್ಯ ಚುನಾವಣಾಧಿಕಾರಿಯವರ ಕಛೇರಿ, ಕರ್ನಾಟಕ

ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು-560 001.

---

**ಸಂಖ್ಯೆ:** ಸಿಆಸುಇ/43/SVEEP/2024 **ದಿನಾಂಕ:-** 25-09-2024

## ಸುತ್ತೋಲೆ

**ವಿಷಯ:** **2024-25ನೇ ಸಾಲಿನಲ್ಲಿ ರಾಷ್ಟ್ರೀಯ ಮತದಾರರ ದಿನಾಚರಣೆ (NVD) ಗೆ ಸಂಬಂಧಿಸಿದಂತೆ ಶೈಕ್ಷಣಿಕ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಚಟುವಟಿಕೆಗಳನ್ನು ಆಯೋಜಿಸುವ ಕುರಿತು.**

* * * * * *

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ನೂತನ ಮತ್ತು ಭವಿಷ್ಯದ ಯುವ ಮತದಾರರಲ್ಲಿ ಚುನಾವಣೆ ಮತ್ತು ಮತದಾನ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಜಾಗೃತಿ ಮೂಡಿಸುವ ಸಲುವಾಗಿ ಪ್ರೌಢಶಾಲೆಗಳು, ಪದವಿ ಪೂರ್ವ-ತತ್ಸಮಾನ / ಆರ್ಟ್ಸ್ ಮತ್ತು ಡ್ರಾಯಿಂಗ್ ಶಾಲೆ / ಪ್ರಥಮ ದರ್ಜೆ-ತತ್ಸಮಾನ ಕಾಲೇಜುಗಳು /ವೈದ್ಯಕೀಯ ಕಾಲೇಜು / ತಾಂತ್ರಿಕ/ಇಂಜಿನೀಯರಿಂಗ್ ಕಾಲೇಜು ಮತ್ತು ವಿಶ್ವವಿದ್ಯಾಲಯಗಳು ಸೇರಿದಂತೆ ಎಲ್ಲಾ ಶೈಕ್ಷಣಿಕ ಸಂಸ್ಥೆಗಳಲ್ಲಿ **"ಮತದಾರರ ಸಾಕ್ಷರತಾ ಸಂಘ"** [Electoral Literacy Clubs] ಗಳನ್ನು ಹಾಗೂ ಪ್ರತಿ ವಿಧಾನಸಭಾ ಕ್ಷೇತ್ರದ ಮತಗಟ್ಟೆ ಕೇಂದ್ರಗಳಲ್ಲಿ ಚುನಾವಣಾ ಪಾಠಶಾಲೆ [ಚುನಾವಣಾ ಜಾಗೃತಿ ಸಂಘ] ಗಳನ್ನು ಸ್ಥಾಪಿಸಲಾಗಿದೆ.

ಪ್ರತಿ ವರ್ಷ 25ನೇ ಜನವರಿಯಂದು ವಿನೂತನ ಧ್ಯೇಯ ವಾಕ್ಯದೊಂದಿಗೆ ರಾಷ್ಟ್ರೀಯ ಮತದಾರರ ದಿನಾಚರಣೆ (National Voters' Day) ಆಚರಿಸಲಾಗುತ್ತದೆ. ಸದರಿ ದಿನ ಹೊಸ/ಯುವ ಮತದಾರರಿಗೆ ಭಾವಚಿತ್ರವಿರುವ ಮತದಾರರ ಗುರುತಿನ ಚೀಟಿ (Electoral Photo Identity Card- EPIC) ನೀಡಿ ಮತದಾರರ ಸಾಕ್ಷರತೆ ಬಗ್ಗೆ ಜಾಗೃತಿ ಮೂಡಿಸಲಾಗುತ್ತದೆ.

ಪ್ರತಿ ವರ್ಷದಂತೆ ಈ ವರ್ಷವೂ ಸಹ ಶಾಲಾ/ಕಾಲೇಜು, ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧಾತ್ಮಕ ಚಟುವಟಿಕೆಗಳನ್ನು ಆಯೋಜಿಸಬೇಕಾಗಿದ್ದು, ಏರ್ಪಡಿಸಬೇಕಾಗಿರುವ ಸ್ಪರ್ಧೆಗಳ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳ ವಿವರಗಳು ಈ ಕೆಳಕಂಡಂತಿರುತ್ತವೆ.

**I ರಾಷ್ಟ್ರೀಯ ಮತದಾರರ ದಿನಾಚರಣೆ (National Voters' Day)-2025 ರ ಅಂಗವಾಗಿ ಏರ್ಪಡಿಸಬೇಕಾದ ಸ್ಪರ್ಧೆಗಳ ವಿವರ :-**

1. ಪ್ರಬಂಧ ಸ್ಪರ್ಧೆ (Essay competition) (ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ)
2. ಭಿತ್ತಿ ಚಿತ್ರ (Poster design)
3. ರಸಪ್ರಶ್ನೆ (Quiz)
4. ಮತದಾರರ ಜಾಗೃತಿ ರೀಲ್ಸ್‌ಗಳು (Electoral Awareness Reels) (ಎಲ್ಲಾ ಪದವಿ/ಸ್ನಾತ್ತಕೋತ್ತರ/ತತ್ಸಮಾನ ವಿದ್ಯಾರ್ಥಿಗಳಿಗೆ ಮಾತ್ರ)

**II ಸ್ಪರ್ಧೆಗಳನ್ನುಆಯೋಜಿಸಬೇಕಾದ ವಿದ್ಯಾಸಂಸ್ಥೆಗಳು:-**

1. ಪ್ರೌಢಶಾಲೆಗಳು [ಸರ್ಕಾರಿ, ಅನುದಾನಿತ ಮತ್ತು ಖಾಸಗಿ ವಿದ್ಯಾಸಂಸ್ಥೆಗಳು]
2. ಪದವಿ ಪೂರ್ವ / ತತ್ಸಮಾನ ಕಾಲೇಜುಗಳು, ಪಾಲಿಟೆಕ್ನಿಕ್ ಸಂಸ್ಥೆಗಳು [ಸರ್ಕಾರಿ, ಅನುದಾನಿತ ಮತ್ತು ಖಾಸಗಿ ವಿದ್ಯಾಸಂಸ್ಥೆಗಳು]

3. ಪದವಿ / ತತ್ಸಮಾನ ಕಾಲೇಜುಗಳು, [ಸರ್ಕಾರಿ, ಅನುದಾನಿತ ಮತ್ತು ಖಾಸಗಿ ವಿದ್ಯಾಸಂಸ್ಥೆಗಳು]
4. ತಾಂತ್ರಿಕ/ಇಂಜಿನೀಯರಿಂಗ್ ಶಿಕ್ಷಣ ಸಂಸ್ಥೆಗಳು, ವೈದ್ಯಕೀಯ ಕಾಲೇಜುಗಳು, ವಿಶ್ವವಿದ್ಯಾನಿಲಯಗಳು / ಸ್ನಾತ್ತಕೋತ್ತರ, [ಸರ್ಕಾರಿ, ಅನುದಾನಿತ ಮತ್ತು ಖಾಸಗಿ ವಿದ್ಯಾಸಂಸ್ಥೆಗಳು]

**III ನಡೆಸಬೇಕಾದ ಸ್ಪರ್ಧೆಯ ರೂಪರೇಷೆಗಳು :–**

**1. ಪ್ರಬಂಧ** (Essay competition):–
ಗರಿಷ್ಟ 750 ಪದಗಳಿಗೆ ಮೀರದಂತೆ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಬರೆಯುವುದು. ಎರಡೂ ಭಾಷೆಗಳ ಪ್ರಬಂಧವನ್ನು ಪ್ರತ್ಯೇಕವಾಗಿ ಬಹುಮಾನ ನೀಡಲು ಪರಿಗಣಿಸುವುದು. ಪ್ರಬಂಧ ಸ್ಪರ್ಧೆಗಳಿಗೆ ನೀಡಬಹುದಾದ ವಿಷಯಗಳನ್ನು **ಅನುಬಂಧ – 1** ರಲ್ಲಿ ನೀಡಲಾಗಿದೆ.

**2. ಭಿತ್ತಿ ಚಿತ್ರ ತಯಾರಿಕೆ** (Poster design) :–
22 X 28 ಇಂಚಿನ ಸ್ಟ್ಯಾಂಡರ್ಡ್ ಚಾರ್ಟ್ ಪೇಪರಿನಲ್ಲಿ ಭಿತ್ತಿಚಿತ್ರ ತಯಾರಿಕೆಗೆ ನೀಡಬಹುದಾದ ವಿಷಯಗಳ ಮಾದರಿಯನ್ನು **ಅನುಬಂಧ – 1** ರಲ್ಲಿ ನೀಡಲಾಗಿದೆ.

**3. ರಸಪ್ರಶ್ನೆ** :–
ಚುನಾವಣಾ ವಿಷಯಕ್ಕೆ ಸಂಬಂಧಿಸಿದ ಬಹು ಆಯ್ಕೆಯ ಪ್ರಶ್ನೆಗಳನ್ನು ಆಯಾ ವಿದ್ಯಾ ಸಂಸ್ಥೆ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಸಿದ್ಧಪಡಿಸಿಕೊಂಡು ಸ್ಪರ್ಧೆ ಆಯೋಜನೆ ಮಾಡುವುದು.

**4. ಮತದಾರರ ಜಾಗೃತಿ ರೀಲ್ಸ್‌ಗಳು (Electoral Awareness Reels) :–**
ಎಲ್ಲಾ ಪದವಿ/ಸ್ನಾತ್ತಕೋತ್ತರ/ತತ್ಸಮಾನ ವಿದ್ಯಾರ್ಥಿಗಳಿಗೆ ಅನುಬಂಧ–1 ರಲ್ಲಿ ಸೂಚಿಸಿರುವ ವಿಷಯಗಳ ಬಗ್ಗೆ 1 ನಿಮಿಷದ ಮತದಾರರ ಜಾಗೃತಿ ರೀಲ್ಸ್ (Electoral Awareness Reels) ಗಳನ್ನು ಪ್ರತ್ಯೇಕವಾಗಿ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಮಾಡುವುದು ಮತ್ತು ಬಹುಮಾನಗಳನ್ನು ಎರಡೂ ಭಾಷೆಗಳಲ್ಲಿನ ರೀಲ್ಸ್‌ಗಳಿಗೆ ವಿತರಿಸುವುದು.

**IV ಸಂಪನ್ಮೂಲ ಮತ್ತು ಓದಬೇಕಾದ ಪುಸ್ತಕಗಳು:–**

1. Related to –Lok Sabha Elections 2024 / ಲೋಕಸಭಾ ಚುನಾವಣೆ 2024
2. Related to - Assembly Elections 2023/ ವಿಧಾನ ಸಭಾ ಚುನಾವಣೆ 2023
3. Returning Officer's Handbook/ ರಿಟರ್ನಿಂಗ್ ಅಧಿಕಾರಿಯ ಕೈಪಿಡಿ
4. Book on Model code of conduct / ಮಾದರಿ ನೀತಿಸಂಹಿತೆಯ ಕೈಪಿಡಿ
5. SVEEP National Document / ರಾಷ್ಟ್ರೀಯ SVEEP ದಾಖಲೆ
6. SVEEP Portal / SVEEP ಪೋರ್ಟಲ್
7. Watching Videos from ECI you tube / ಭಾರತ ಚುನಾವಣಾ ಆಯೋಗದ ಯೂ–ಟ್ಯೂಬ್ ಚಾನಲ್ ವೀಕ್ಷಣೆ
8. Consistently following the updating from India Votes Face book page and others / ಭಾರತ ಮತದಾರರ ಫೇಸ್‌ಬುಕ್ ಪುಟ ಹಾಗೂ ಇತರೆ, ನಿರಂತರ ವೀಕ್ಷಣೆ ಹಾಗೂ ಇಂದೀಕರಣ.

9. ECI web site/ ಭಾರತ ಚುನಾವಣಾ ಆಯೋಗದ ಅಂತರ್ಜಾಲ : https://www.eci.gov.in/
10. CEO web site / ಮುಖ್ಯ ಚುನಾವಣಾಧಿಕಾರಿಗಳ [ಸಿಇಓ] ಅಂತರ್ಜಾಲ: https://ceo.karnataka.gov.in/, https://ceosveep.karnataka.gov.in

**V ಸ್ಪರ್ಧಾತ್ಮಕ ಚಟುವಟಿಕೆಗಳನ್ನು ನಡೆಸಬೇಕಾದ ವೇಳಾಪಟ್ಟಿ ಹಾಗೂ ಕಾರ್ಯಕ್ರಮದ ಜವಾಬ್ದಾರಿ :-**

ಸ್ಪರ್ಧಾತ್ಮಕ ಚಟುವಟಿಕೆಗಳನ್ನು ಶಾಲೆ/ಕಾಲೇಜು, ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಏರ್ಪಡಿಸಬೇಕಾಗಿರುವ ವೇಳಾಪಟ್ಟಿ ಮತ್ತು ಕಾರ್ಯಕ್ರಮದ ಜವಾಬ್ದಾರಿಯನ್ನು ನಿಗದಿ ಮಾಡಿರುವ ವಿವರಗಳನ್ನು **ಅನುಬಂಧ –2** ರಲ್ಲಿ ನೀಡಲಾಗಿದೆ.

**VI ಬಹುಮಾನದ ಅನುದಾನ ಹಂಚಿಕೆ :-**

ಈ ಸ್ಪರ್ಧಾತ್ಮಕ ಚಟುವಟಿಕೆಗಳನ್ನು ಆಯೋಜಿಸಲು ಹಾಗೂ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುವ ಸಲುವಾಗಿ ಪ್ರತಿ ಸ್ಪರ್ಧೆಗೆ ಬಹುಮಾನವನ್ನು ನೀಡುವುದು. ಶಾಲಾ ಮಟ್ಟದಲ್ಲಿ ಆಯೋಜಿಸುವ ಸ್ಪರ್ಧೆಗಳಿಗೆ ಬೇಕಾಗುವ ಅನುದಾನವನ್ನು ಸ್ಥಳೀಯ ನಿಧಿಯಿಂದ ಭರಿಸತಕ್ಕದ್ದು.

ರಸಪ್ರಶ್ನೆ ಸ್ಪರ್ಧೆಗಳಿಗೆ ಸಂಬಂಧಿಸಿದಂತೆ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಸ್ಪರ್ಧೆಗಳ ವಿಜೇತರಿಗೆ ಈ ಕೆಳಕಂಡಂತೆ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನಗಳನ್ನು ನಗದು ರೂಪದಲ್ಲಿ ಚೆಕ್/RTGS ಮುಖಾಂತರ ವಿತರಿಸುವುದು.

| ಬಹುಮಾನಗಳ ವಿವರ | ಮೊತ್ತ ರೂಪಾಯಿಗಳಲ್ಲಿ | | |
|---|---|---|---|
| | ತಾಲ್ಲೂಕು ಮಟ್ಟ | ಜಿಲ್ಲಾ ಮಟ್ಟ | ರಾಜ್ಯ ಮಟ್ಟ |
| ಪ್ರಥಮ ಬಹುಮಾನ | 400 | 1200 | 3000 |
| ದ್ವಿತೀಯ ಬಹುಮಾನ | 300 | 800 | 2500 |
| ತೃತೀಯ ಬಹುಮಾನ | 200 | 600 | 2000 |

ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ನಡೆಯುವ ಸ್ಪರ್ಧೆಗಳಿಗೆ ಒದಗಿಸುವ ಅನುದಾನದ ವಿವರಗಳನ್ನು **ಅನುಬಂಧ – 3** ರಲ್ಲಿ ನೀಡಲಾಗಿದೆ. ಬಹುಮಾನಗಳನ್ನು ನಗದು ರೂಪದಲ್ಲಿ ಚೆಕ್/RTGS ಮುಖಾಂತರ ವಿತರಿಸುವುದು.

**VII ವಿಜೇತರನ್ನು ಆಯ್ಕೆ ಮಾಡುವ ಕಾರ್ಯ ವಿಧಾನ:-**

1. ಶಾಲೆ ಮಟ್ಟದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರು ವಿಜೇತರನ್ನು ಆಯ್ಕೆ ಮಾಡುವುದು.
2. ತಾಲ್ಲೂಕು ಮಟ್ಟದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ವಿಜೇತರನ್ನು ಆಯ್ಕೆ ಮಾಡುವುದು.
3. ಜಿಲ್ಲಾ ಮಟ್ಟದ ವಿಜೇತರನ್ನು ಆಯ್ಕೆ ಮಾಡುವ ಸಮಿತಿಯು ಜಿಲ್ಲಾ ಪಂಚಾಯ್ತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ನೇತೃತ್ವದಲ್ಲಿ, ಉಪನಿರ್ದೇಶಕರು [ಆಡಳಿತ], ಉಪನಿರ್ದೇಶಕರು [ಅಭಿವೃದ್ಧಿ], ಉಪನಿರ್ದೇಶಕರು [ಪದವಿ ಪೂರ್ವ], ಆಯಾ ಜಿಲ್ಲೆಯ ಪದವಿ/ ತಾಂತ್ರಿಕ/ ವೈದ್ಯಕೀಯ ಕಾಲೇಜುಗಳ ಪ್ರಾಂಶುಪಾಲರನ್ನೊಳಗೊಂಡಿರುತ್ತದೆ.
4. ಶಾಲಾ ಮಟ್ಟದಲ್ಲಿ ಆಯ್ಕೆಯಾದ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ವಿದ್ಯಾರ್ಥಿಗಳನ್ನು ತಾಲ್ಲೂಕು ಮಟ್ಟಕ್ಕೆ, ಅದೇ ರೀತಿ ತಾಲ್ಲೂಕು ಮಟ್ಟದಿಂದ ಜಿಲ್ಲಾ ಮಟ್ಟಕ್ಕೆ ಮತ್ತು ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳನ್ನು ಮಾತ್ರ ರಾಜ್ಯ ಮಟ್ಟಕ್ಕೆ ಆಯ್ಕೆ ಮಾಡತಕ್ಕದ್ದು.

## VIII ಉಸ್ತುವಾರಿ, ಮತ್ತು ದಸ್ತಾವೇಜು ಮಾಡುವುದರ ವರದಿ ಸಿದ್ದಪಡಿಸುವುದು:-

1. ಶಾಲಾ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ಮತ್ತು ವಿಜೇತರ ಪಟ್ಟಿಯನ್ನು ಹಾಗೂ ಸ್ಪರ್ಧೆಗಳನ್ನು ವೀಕ್ಷಿಸಿದ ವೀಕ್ಷಕರ. ಮಾಹಿತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ನೀಡುವುದು.
2. ತಾಲ್ಲೂಕು ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ಮತ್ತು ವಿಜೇತರ ಪಟ್ಟಿಯನ್ನು ಹಾಗೂ ಸ್ಪರ್ಧೆಗಳನ್ನು ವೀಕ್ಷಿಸಿದ ವೀಕ್ಷಕರ ಮಾಹಿತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಆಯಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಕಛೇರಿಗೆ ನೀಡುವುದು.
3. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರು SVEEP ನೋಡಲ್/ಜಿಲ್ಲಾ ಸಮನ್ವಯಾಧಿಕಾರಿಗಳು ಸಹ ಆಗಿದ್ದು, ಅಂತರ ಶಾಲೆ / ಅಂತರ ಪದವಿ ಪೂರ್ವ ಕಾಲೇಜು/ ಅಂತರ ಪದವಿ ಕಾಲೇಜು / ಅಂತರ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ನಡೆಯುವ ಸ್ಪರ್ಧೆಗಳ ಚಟುವಟಿಕೆ ಬಗ್ಗೆ ಉಸ್ತುವಾರಿ ವಹಿಸಿ ಸ್ಪರ್ಧೆಗಳ ವಿವರಗಳನ್ನು ಮುಖ್ಯ ಚುನಾವಣಾಧಿಕಾರಿಗಳ ಕಛೇರಿಯು ಅಳವಡಿಸುವ ಗೂಗಲ್ ಸ್ಪ್ರೆಡ್‌ಶೀಟ್‌ನಲ್ಲಿ ನಮೂದಿಸುವುದು.
4. ಮೇಲೆ ತಿಳಿಸಿರುವ ಎಲ್ಲಾ ಚಟುವಟಿಕೆಗಳನ್ನು, ಸ್ಪರ್ಧೆಯ ಪ್ರಕ್ರಿಯೆಯನ್ನು ಹಾಗೂ ಅದರಲ್ಲಿ ಗಮನಿಸಲಾದ ಅತ್ಯುತ್ತಮ ಅಭ್ಯಾಸಗಳನ್ನು ಒಳಗೊಂಡ ಪ್ರಕರಣಗಳನ್ನು ದಾಖಲಿಸಿ, ಅತ್ಯುತ್ತಮ ಗುಣಮಟ್ಟದ (High Resolution) ಫೋಟೋಗಳನ್ನು ವಿವರಣೆಯೊಂದಿಗೆ/ಸೂಕ್ತ ಶೀರ್ಷಿಕೆಯೊಂದಿಗೆ ಅದರ ವರದಿಯನ್ನು ಮುಖ್ಯ ಚುನಾವಣಾಧಿಕಾರಿಗಳ ಕಛೇರಿಯ ಇ-ಮೇಲ್ (consveep@gmai.com) ಗೆ ಕಳುಹಿಸುವುದು.

## IX ಭಾಗೀದಾರರ (stakeholder) ಜವಾಬ್ದಾರಿಗಳು:-

| ಅಧಿಕಾರಿಗಳು | ಜವಾಬ್ದಾರಿಗಳು |
|---|---|
| ಉಪ ನಿರ್ದೇಶಕರು [ಆಡಳಿತ], ಸಾರ್ವಜನಿಕ ಶಿಕ್ಷಣ ಇಲಾಖೆ<br>ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ,<br>ಪಾಲಿಟೆಕ್ನಿಕ್ ನೋಡಲ್ ಅಧಿಕಾರಿಗಳು,<br>ಪದವಿ /ತಾಂತ್ರಿಕ/ವೈದ್ಯಕೀಯ ಕಾಲೇಜುಗಳ ನೋಡಲ್ ಅಧಿಕಾರಿಗಳು,<br>ವಿಶ್ವವಿದ್ಯಾನಿಲಯಗಳ ನೋಡಲ್ ಅಧಿಕಾರಿಗಳು | 1. ಸ್ಪರ್ಧೆಗಳ ಬಗ್ಗೆ ಶಾಲೆಗಳು / ಕಾಲೇಜುಗಳಿಗೆ ತಿಳಿಸುವುದು ಮತ್ತು ಜಿಲ್ಲೆಯ ಚಟುವಟಿಕೆಗಳ ಮೇಲ್ವಿಚಾರಣೆ ಮತ್ತು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಇವರಿಗೆ ವರದಿ ಮಾಡುವುದು.<br>2. ಶಿಕ್ಷಣ ಸಂಸ್ಥೆಗಳು ಫಲಿತಾಂಶವನ್ನು ಸಂಬಂಧಿಸಿದ ವಿದ್ಯಾರ್ಥಿಗಳಿಗೆ ತಿಳಿಸಬೇಕು. ಪ್ರಬಂಧವನ್ನು ಎಲ್ಲರ ಮೊಬೈಲ್ ವಾಟ್ಸ್ಯಾಪ್‌ಗಳಿಗೆ ರವಾನಿಸತಕ್ಕದ್ದು. ಇದರಿಂದ ಎಲ್ಲರಿಗೂ ಅನುಕೂಲವಾಗುತ್ತದೆ. ಫಲಿತಾಂಶವನ್ನು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ ಇವರಿಗೆ ಆನ್‌ಲೈನ್‌ನಲ್ಲಿ ವರದಿ ಮಾಡತಕ್ಕದ್ದು. |
| ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ SVEEP ನೋಡಲ್ ಅಧಿಕಾರಿಗಳು | ಪ್ರಬಂಧ, ಭಿತ್ತಿಚಿತ್ರ ತಯಾರಿಕೆ ರಸಪ್ರಶ್ನೆ ಚುಟುವಟಿಕೆಗಳಲ್ಲಿ ಜಿಲ್ಲಾ ಮಟ್ಟದಲ್ಲಿನ ವಿಜೇತರ ವರದಿಯನ್ನು ಗೂಗಲ್ ಸ್ಪ್ರೆಡ್ ಶೀಟ್‌ನಲ್ಲಿ ಅಳವಡಿಸಲು ಕ್ರಮ ಜರುಗಿಸುವುದು. |

| | |
|---|---|
| ಹಿರಿಯ ಸಮಾಲೋಚಕರು [SVEEP] | ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ಮಾಹಿತಿಯನ್ನು ಆನ್‌ಲೈನ್ ಮೂಲಕ ಪ್ರಸಾರ ಮಾಡುವುದು ಮತ್ತು ಜಿಲ್ಲೆಗಳ ವಿದ್ಯಾರ್ಥಿಗಳ ವಿವರಗಳು, ಪ್ರೇಕ್ಷಕರ ಹಾಜರಾತಿ, ವಿಜೇತರ ವಿವರಗಳು ಸೇರಿದಂತೆ ದತ್ತಾಂಶ ಸಂಗ್ರಹಣೆ ಕುರಿತು DEO / ZP CEO ಗಳೊಂದಿಗೆ ಸಮನ್ವಯ ಸಾಧಿಸುವುದು. |
| ಬಿಬಿಎಂಪಿಯ ವಿಶೇಷ ಆಯುಕ್ತರು | ಬಿಬಿಎಂಪಿ ಪ್ರದೇಶದ ಎಲ್ಲಾ ಶಾಲೆಗಳಲ್ಲಿನ ನೋಡಲ್ ಅಧಿಕಾರಿಗಳಿಗೆ ಆನ್‌ಲೈನ್ ಮೂಲಕ ಮಾಹಿತಿಯನ್ನು ಪ್ರಸಾರ ಮಾಡಲು ಮತ್ತು ಸ್ಪರ್ಧೆಯನ್ನು ಕಾರ್ಯಗತಗೊಳಿಸುವ ಜವಾಬ್ದಾರಿ ಹೊಂದಿರುತ್ತಾರೆ. |

**X ನಮೂದುಗಳು ಮತ್ತು ಸಂಪರ್ಕ ಮಾಹಿತಿಯ ಸಲ್ಲಿಕೆ:–**

1. ಎಲ್ಲಾ ಸ್ಪರ್ಧೆಗಳ ವಿಜೇತರ ಸಂಪೂರ್ಣ ವಿವರಗಳನ್ನು ಕಡ್ಡಾಯವಾಗಿ ಈ ಕಛೇರಿಯಿಂದ ಒಳವಡಿಸುವ ಗೂಗಲ್ ಸ್ಪ್ರೆಡ್‌ಶೀಟ್‌ನಲ್ಲಿ ನಮೂದಿಸುವುದು.
2. ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದ ಸ್ಪರ್ಧೆಗಳ ವಿಜೇತರ ಸಂಪೂರ್ಣ ವಿವರಗಳನ್ನು ಅಂತಿಮವಾಗಿ ಪರಿಶೀಲಿಸಿದ ನಂತರ, ಗೂಗಲ್ ಸ್ಪ್ರೆಡ್‌ಶೀಟ್‌ನಲ್ಲಿ ಅಳವಡಿಸುವ ಜವಾಬ್ದಾರಿಯನ್ನು ಹಾಗೂ Edit Access ನ್ನು ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ SVEEP ನೋಡಲ್ ಅಧಿಕಾರಿಗಳಿಗೆ ಮಾತ್ರ ನೀಡಲಾಗುವುದು.
3. ಎಲ್ಲಾ ಮತದಾರರ ಸಾಕ್ಷರತಾ ಸಂಘಗಳು ರಾಷ್ಟ್ರೀಯ ಮತದಾರರ ದಿನಾಚರಣೆಯ ಅಂಗವಾಗಿ ಆಯೋಜಿಸಿರುವ ಸ್ಪರ್ಧೆಗಳ ವಿವರಗಳನ್ನು, ಛಾಯಾ ಚಿತ್ರಗಳನ್ನು ಹಾಗೂ ವಿಡಿಯೋಗಳನ್ನು ELCs Management Software Portal ನಲ್ಲಿ Update ಮಾಡುವುದು.

ಯಾವುದೇ ಪ್ರಶ್ನೆ ಅಥವಾ ಸ್ಪಷ್ಟೀಕರಣಕ್ಕಾಗಿ, consveep@gmail.com ಅಥವಾ 180042551950ಗೆ ಕರೆ ಮಾಡಬಹುದು, ಶ್ರೀ ಎಂ.ವಿ. ವೆಂಕಟಾಚಲಪತಿ, ಸಹಾಯಕ ಪ್ರಾಧ್ಯಾಪಕರು, ಮೊ: 9880152623. ಶ್ರೀ ರಮೇಶ್, ಆರ್. ಹಿರಿಯ ಸಹಾಯಕರು, ಮೊ: 8867644865, ಶ್ರೀ. ಫಹೀಮುದ್ದೀನ್ ತುರ್ಕಿ, ಡೇಟಾ ಎಂಟ್ರಿ ಆಪರೇಟರ್– ಮೊ:7338423760 ಇವರುಗಳನ್ನು ಸಂಪರ್ಕಿಸಬಹುದು ಎಂದು ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

23/9/24

(ಕೂರ್ಮಾ ರಾವ್. ಎಂ)
ಅಪರ ಮುಖ್ಯ ಚುನಾವಣಾಧಿಕಾರಿಗಳು
ಸಿ.ಆ.ಸು.ಇ (ಚುನಾವಣೆಗಳು)

**ಪ್ರತಿಯನ್ನು ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ:–**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಬೆಂಗಳೂರು.
3. ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ. ಬೆಂಗಳೂರು.
4. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಮಾನ್ಯ ಕುಲಪತಿಗಳು,
5. ಮಾನ್ಯ ಕುಲಪತಿಗಳು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.

6. ಮಾನ್ಯ ಕುಲಪತಿಗಳು, ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ, ಬೆಂಗಳೂರು.
7. ಆಯುಕ್ತರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು,
8. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು,
9. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರ 18ನೇ ಸಂಪಿಗೆ ರಸ್ತೆ, ಬೆಂಗಳೂರು.
10. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು,
11. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
12. ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು/ಕಲಬುರಗಿ/ಬೆಳಗಾವಿ/ಮೈಸೂರು.
13. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರಗಿ,
14. ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು,
15. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು & SVEEP ನೋಡಲ್ ಅಧಿಕಾರಿಗಳು,
16. ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು [ಪ್ರಾಥಮಿಕ ಶಿಕ್ಷಣ] [ಪ್ರೌಢಶಿಕ್ಷಣ] ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಮತ್ತು ಡಿ.ಎಸ್.ಇ.ಆರ್.ಟಿ. ಹಾಗೂ ವಿಭಾಗೀಯ ಇಎಲ್‌ಸಿ ನೋಡಲ್ ಅಧಿಕಾರಿಗಳು,
17. ನಿರ್ದೇಶಕರು, ಅಪರ ಆಯುಕ್ತಾಲಯ, ಕಲಬುರಗಿ ಮತ್ತು ಧಾರವಾಡ. ಹಾಗೂ ವಿಭಾಗೀಯ ELC ನೋಡಲ್ ಅಧಿಕಾರಿಗಳು,
18. ಉಪ–ನಿರ್ದೇಶಕರು [ಆಡಳಿತ] ಸಾರ್ವಜನಿಕ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಮಂಡಳಿ, ಬೆಂಗಳೂರು.
19. ಎಲ್ಲಾ ಜಿಲ್ಲೆಗಳ ಉಪ–ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ,
20. ಎಲ್ಲಾ ಜಿಲ್ಲೆಗಳ ಉಪ–ನಿರ್ದೇಶಕರು [ಆಡಳಿತ] ಮತ್ತು [ಅಭಿವೃದ್ಧಿ] ಸಾರ್ವಜನಿಕ ಶಿಕ್ಷಣ ಇಲಾಖೆ,
21. ಎಲ್ಲಾ ತಹಸೀಲ್ದಾರರು, ಕಂದಾಯ ಇಲಾಖೆ, ಕರ್ನಾಟಕ ರಾಜ್ಯ,
22. ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ,
23. ಕಛೇರಿ ಪ್ರತಿ/ರಕ್ಷಾ ಕಡತಕ್ಕೆ.

## ಅನುಬಂಧ–01

**ಸಂಖ್ಯೆ:** ಸಿಆಸುಇ/43/SVEEP/2024, **ದಿನಾಂಕ:** 25–09–2024

**2024–25ನೇಸಾಲಿನರಾಷ್ಟ್ರೀಯಮತದಾರದಿನಾಚರಣೆಅಂಗವಾಗಿನಡೆಸುವವಿವಿಧಸ್ಪರ್ಧೆಗಳವಿವರ**

| ಕ್ರ.ಸಂ | ಸ್ಪರ್ಧೆ | | ಮಟ್ಟ | ವಿಷಯ |
|---|---|---|---|---|
| 01 | ಭಿತ್ತಿ ಚಿತ್ರ ರಚನೆ (Poster Making) | ತಾಲ್ಲೂಕು ಮಟ್ಟ | ಪ್ರೌಢ ಶಾಲೆ | ಮತ ಚಲಾಯಿಸಲು ಜನರನ್ನು ಪ್ರೋತ್ಸಾಹಿಸುವ ವಿಧಾನಗಳು.<br>Methods of encouraging people to vote. |
| | | | ಪದವಿ ಪೂರ್ವ/ ತತ್ಸಮಾನ | ಒಳಗೊಳ್ಳುವ ಚುನಾವಣೆಗಳು.<br>Inclusive elections. |
| | | | ಪದವಿ/ಸ್ನಾತ್ತಕೋತ್ತರ/ ತತ್ಸಮಾನ | ವಿಶೇಷ ಚೇತನ ಮತದಾರರಿಗೆ ಒದಗಿಸಿರುವ ಸೌಲಭ್ಯಗಳು<br>Facilities provided for Person with Disabilities (PwD) voters |
| | | ಜಿಲ್ಲಾ ಮಟ್ಟ | ಪ್ರೌಢ ಶಾಲೆ | ಸಾಂಪ್ರಾದಾಯಿಕ ಮತಗಟ್ಟೆ ಕೇಂದ್ರಗಳು.<br>Traditional Polling Stations. |
| | | | ಪದವಿ ಪೂರ್ವ/ ತತ್ಸಮಾನ | ಚುನಾವಣಾ ಜಾಗೃತಿ ಕುರಿತಾದ ಅಭಿಯಾನ/ಜಾಥಾ.<br>Electoral awareness drive / jatha. |
| | | | ಪದವಿ/ಸ್ನಾತ್ತಕೋತ್ತರ/ ತತ್ಸಮಾನ | BLO ಗಳ ಮೂಲಕ ಮನೆ ಮನೆಯ ಸಮೀಕ್ಷೆ.<br>House to house survey by BLOs. |
| 02 | ಪ್ರಬಂಧ ಸ್ಪರ್ಧೆ (Essay Writing) | ತಾಲ್ಲೂಕು ಮಟ್ಟ | ಪ್ರೌಢ ಶಾಲೆ | ಮತದಾನದಲ್ಲಿ ಇ.ವಿ.ಎಂ. ಮತ್ತು ವಿ.ವಿ.ಪ್ಯಾಟ್‌ಗಳ ಪ್ರಾಮುಖ್ಯತೆ.<br>Importance of EVM & VVPAT in voting process. |
| | | | ಪದವಿ ಪೂರ್ವ/ ತತ್ಸಮಾನ | ನಮೂನೆ 6, 7 & 8 ಗಳ ಬಳಕೆ ಮತ್ತು ಪ್ರಾಮುಖ್ಯತೆ.<br>Use and importance of forms 6, 7 & 8. |
| | | ಜಿಲ್ಲಾ ಮಟ್ಟ | ಪ್ರೌಢ ಶಾಲೆ | ಮತದಾರರ ಶಿಕ್ಷಣದಲ್ಲಿ ಮತದಾರರ ಸಾಕ್ಷರತಾ ಸಂಘಗಳ ಪಾತ್ರ.<br>The role of Electoral Literacy Clubs in electoral education. |
| | | | ಪದವಿ ಪೂರ್ವ/ ತತ್ಸಮಾನ | ಚುನಾವಣಾ ಸಂಬಂಧಿತ ಆ್ಯಪ್‌ಗಳ ಕುರಿತು ಪ್ರಬಂಧ ಬರೆಯಿರಿ.<br>Write an essay about election related apps. |
| 03 | ರೀಲ್ಸ್ Reels | ತಾಲ್ಲೂಕು ಮಟ್ಟ | ಪದವಿ/ಸ್ನಾತ್ತಕೋತ್ತರ/ ತತ್ಸಮಾನ | ಶಿಕ್ಷಣ ವ್ಯವಸ್ಥೆಯಲ್ಲಿ ಮತದಾರರ ಶಿಕ್ಷಣ ಮತ್ತು ಭಾಗವಹಿಸುವಿಕೆ ಬಹಳ ಅವಶ್ಯಕ.<br>Electors education and participation is very much essential in educational system. |
| | | ಜಿಲ್ಲಾ ಮಟ್ಟ | ಪದವಿ/ಸ್ನಾತ್ತಕೋತ್ತರ/ ತತ್ಸಮಾನ | ಪರಿಣಾಮಕಾರಿ ಚುನಾವಣೆ ನಡೆಸುವಲ್ಲಿ ಯುವಕರ ಪಾತ್ರ.<br>The role of youth in conducting effective elections. |
| 04 | ರಸಪ್ರಶ್ನೆ (Quiz) | ಪ್ರೌಢ ಶಾಲೆ | | ಚುನಾವಣಾ ವಿಷಯಕ್ಕೆ ಸಂಬಂಧಿಸಿದ ಬಹು ಆಯ್ಕೆಯ ಪ್ರಶ್ನೆಗಳನ್ನು ಆಯಾ ವಿದ್ಯಾ ಸಂಸ್ಥೆ, ತಾಲ್ಲೂಕು ಮಟ್ಟದಲ್ಲಿ BEO ಹಂತದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ DDPI/DDPU ಹಂತದಲ್ಲಿ ಮತ್ತು ಪದವಿ ಕಾಲೇಜುಗಳಿಗೆ ಪ್ರಾಂಶುಪಾಲರ ಮಟ್ಟದಲ್ಲಿ/ಜಿಲ್ಲಾ ನೋಡಲ್ ಕಾಲೇಜು/ ಇಂಜಿನೀಯರಿಂಗ್/ ವೈದ್ಯಕೀಯ ಕಾಲೇಜುಗಳ ಪ್ರಾಂಶುಪಾಲರ ಮಟ್ಟದಲ್ಲಿ ಬಹು ಆಯ್ಕೆ ಮಾದರಿಯ ಪ್ರಶ್ನೆಗಳನ್ನು ಸಿದ್ಧಪಡಿಸಿ ಸ್ಪರ್ಧೆಗಳನ್ನು ಆಯೋಜಿಸುವುದು. |
| | | ಪದವಿ ಪೂರ್ವ/ ತತ್ಸಮಾನ | | |
| | | ಪದವಿ/ಸ್ನಾತ್ತಕೋತ್ತರ/ ತತ್ಸಮಾನ | | |

**ವಿಶೇಷ ಸೂಚನೆ: – ಮತದಾರರ ಜಾಗೃತಿ ರೀಲ್ಸ್‌ಗಳು (Electoral Awareness Reels) ಎಲ್ಲಾ ಪದವಿ/ಸ್ನಾತ್ತಕೋತ್ತರ/ ತತ್ಸಮಾನ ವಿದ್ಯಾರ್ಥಿಗಳು ಮಾತ್ರ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಪ್ರತ್ಯೇಕವಾಗಿ ಮಾಡುವುದು.**

## ಅನುಬಂಧ–2

**ಸಂಖ್ಯೆ:** ಸಿಆಸುಇ/43/SVEEP/2024, **ದಿನಾಂಕ:** 25–09–2024

**ಸ್ಪರ್ಧಾ ಚಟುವಟಿಕೆಗಳನ್ನು ನಡೆಸಬೇಕಾದ ವೇಳಾಪಟ್ಟಿ ಹಾಗೂ ಕಾರ್ಯಕ್ರಮದ ಜವಾಬ್ದಾರಿ:–**

| ಕ್ರ ಸಂ | ಚಟುವಟಿಕೆ | ನಿಗದಿಪಡಿಸಿದ ದಿನಾಂಕ | ಕಾರ್ಯಕ್ರಮದ ಜವಾಬ್ದಾರಿ ನಿಗದಿ |
|---|---|---|---|
| 1 | ಸ್ಪರ್ಧೆಗಳ ಬಗ್ಗೆ ಎಲ್ಲಾ ಶಾಲಾ–ಕಾಲೇಜುಗಳಿಗೆ ತಿಳಿಸುವುದು | 25–09–2024 | ಆಯುಕ್ತರು/ನಿರ್ದೇಶಕರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಆಯಾ ಜಿಲ್ಲಾ ಉಪನಿರ್ದೇಶಕರು [ಆಡಳಿತ] ಸಾರ್ವಜನಿಕ ಶಿಕ್ಷಣ ಇಲಾಖೆ(ಉಪನಿರ್ದೇಶಕರು, ರಾಜ್ಯ & ಜಿಲ್ಲಾ ಮಟ್ಟದ ತರಬೇತುದಾರರು, ಪ್ರಾಂಶುಪಾಲರು) |
| 2 | ವಿದ್ಯಾರ್ಥಿಗಳ ನೋಂದಣಿ:– ರಸಪ್ರಶ್ನೆ, ಪ್ರಬಂಧ, ಭಿತ್ತಿಚಿತ್ರ ಮತ್ತು ರೀಲ್ಸ್ | 03–10–2024 | ಮತದಾರ ಸಾಕ್ಷರತಾ ಸಂಘದ ಆಯಾ ಶಾಲಾ ಕಾಲೇಜುಗಳ ನೋಡಲ್ ಅಧಿಕಾರಿಗಳು |
| 3 | ಶಾಲಾ, ಪದವಿ ಪೂರ್ವ ಕಾಲೇಜುಗಳ ಮಟ್ಟದ ಸ್ಪರ್ಧೆಗಳನ್ನು ಆಯೋಜಿಸುವುದು | 25–10–2024 ರಿಂದ 11–11–2024 | ಆಯಾ ಶಾಲೆ/ಕಾಲೇಜುಗಳ ಮತದಾರ ಸಾಕ್ಷರತಾ ಸಂಘದ ನೋಡಲ್ ಅಧಿಕಾರಿಗಳು (ಉಪನಿರ್ದೇಶಕರು, ರಾಜ್ಯ & ಜಿಲ್ಲಾ ಮಟ್ಟದ ತರಬೇತುದಾರರು, ಪ್ರಾಂಶುಪಾಲರು) |
| | ಕಾಲೇಜುಗಳ ಮಟ್ಟದಲ್ಲಿ ಸ್ಪರ್ಧೆಗಳನ್ನು ಕೈಗೊಳ್ಳುವುದು | 04–11–2024 ರಿಂದ 13–11–2024 | ಆಯುಕ್ತರು/ನಿರ್ದೇಶಕರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ. |
| 4 | ತಾಲ್ಲೂಕು ಮಟ್ಟದಲ್ಲಿ ಸ್ಪರ್ಧೆಗಳನ್ನುಕೈಗೊಳ್ಳುವುದು | 14–11–2024 ರಿಂದ 22–11–2024 | ಆಯಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಎಲ್ಲಾ ಪದವಿ ಕಾಲೇಜಿನ ಪ್ರಾಂಶುಪಾಲರುಗಳು |
| 5 | ಜಿಲ್ಲಾ ಮಟ್ಟದಲ್ಲಿ ಸ್ಪರ್ಧೆಗಳನ್ನು ವರ್ಗವಾರು ಆಯೋಜಿಸಿ ವಿಜೇತರನ್ನು ಘೋಷಿಸುವುದು. | 25–11–2024 ರಿಂದ 30–11–2024 | ಆಯಾ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳು |
| 6 | ಜಿಲ್ಲಾ ಮಟ್ಟದ ಸ್ಪರ್ಧೆಗಳನ್ನುಪೂರ್ಣಗೊಳಿಸಿ ವಿಜೇತರ ಪಟ್ಟಿಯನ್ನು ಅಪರ ಮುಖ್ಯ ಚುನಾವಣಾಧಿಕಾರಿ ಇವರಿಗೆ ರವಾನಿಸುವುದು | 05–12–2024 | ಆಯಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು [ಹೈ ರೆಸಲ್ಯೂಷನ್ ಪೋಟೋಗಳು ಮತ್ತು ವಿಜೇತರ ಭಿತ್ತಿ ಚಿತ್ರಗಳು, ಇವುಗಳನ್ನು ಸ್ಕ್ಯಾನ್ ಮಾಡಿ ಪ್ರತಿಗಳನ್ನುconsveep@gmail.comಇ–ಮೇಲ್ ಮಾಡುವುದು. |

| | | | |
|---|---|---|---|
| 7 | ವಿದ್ಯಾರ್ಥಿಗಳ ಮಾಹಿತಿ ಹಾಗೂ ಇತರೆ ಸಂಬಂಧಿಸಿದ ವಿವರಗಳನ್ನು ಸಂಗ್ರಹಿಸಿ ಕ್ರೋಢೀಕರಿಸುವುದು | 05–12–2024 | ಆಯಾ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳು. |
| 8 | ಜಿಲ್ಲಾ ಮಟ್ಟದ ಅಂತಿಮ ವಿಜೇತರ ವಿವರಗಳನ್ನು ಗೂಗಲ್ ಸ್ಪ್ರೆಡ್ ಶೀಟನಲ್ಲಿ ಅಳವಡಿಸುವುದು | 05–12–2024 | ಆಯಾ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳು |
| 9 | ಎಲ್ಲಾ ಜಿಲ್ಲೆಗಳ ರಸಪ್ರಶ್ನೆ, ಪ್ರಬಂಧ, ಭಿತ್ತಿಚಿತ್ರ ಸ್ಪರ್ಧೆಗಳು ಪೂರ್ಣಗೊಂಡಿರುವ ಮಾಹಿತಿ ಸಂಗ್ರಹಣೆ | 05–12–2024 | ಹಿರಿಯ ಸಮಾಲೋಚಕರು [SVEEP]<br>SVEEP ವಿಭಾಗ, ರಾಜ್ಯ ಮಟ್ಟ. |
| 10 | ಪ್ರತಿ ಜಿಲ್ಲೆಯಿಂದ ವಿದ್ಯಾರ್ಥಿಗಳ ಮಾಹಿತಿ ಸಂಗ್ರಹಣೆ | 05–12–2024 | ಹಿರಿಯ ಸಮಾಲೋಚಕರು [SVEEP]<br>SVEEPವಿಭಾಗ, ರಾಜ್ಯ ಮಟ್ಟ. |
| 11 | ರಾಜ್ಯ ಮಟ್ಟದಲ್ಲಿನ ಸ್ಪರ್ಧೆಗೆ ಭಾಗವಹಿಸುವ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ವಸತಿ ವ್ಯವಸ್ಥೆ ಒದಗಿಸುವುದು | ಡಿಸೆಂಬರ್ 2024 ರ ಮೂರನೆ ವಾರ | ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ. |
| 12 | ವಿಭಾಗೀಯ ಮಟ್ಟದ ಸ್ಪರ್ಧೆಗಳು/ ರಾಜ್ಯ ಮಟ್ಟದಲ್ಲಿ ಭಾಗವಹಿಸುವುದು | | ಮತದಾರ ಸಾಕ್ಷರತಾ ಸಂಘದ ತರಬೇತುದಾರರಿಂದ |
| 13 | ವಿಭಾಗೀಯ ಮಟ್ಟದಲ್ಲಿನ ವಿಜೇತರಿಗೆ ರಾಜ್ಯಮಟ್ಟದ ಸ್ಪರ್ಧೆ | | ಅಪರ ಮುಖ್ಯ ಚುನಾವಣಾಧಿಕಾರಿ ಇವರ ಅಧ್ಯಕ್ಷತೆಯಲ್ಲಿ ಸಮಿತಿ |
| 14 | ರಾಜ್ಯ ಮಟ್ಟದ ವಿಜೇತರ ಘೋಷಣೆ | | ಹಿರಿಯ ಸಮಾಲೋಚಕರು[SVEEP]<br>SVEEP ವಿಭಾಗ, ರಾಜ್ಯ ಮಟ್ಟ. |

# ಅನುಬಂಧ–3

**ಸಂಖ್ಯೆ:** ಸಿಆಸುಇ/43/SVEEP/2024, **ದಿನಾಂಕ:** 25–09–2024

**2024–25ನೇಸಾಲಿನ ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದ ಸ್ಪರ್ಧೆಗಳಿಗೆ ಒದಗಿಸುವ ಅನುದಾನದ ವಿವರ**

**ತಾಲ್ಲೂಕು ಮಟ್ಟ**

| ವಿಷಯ | ಅನುದಾನದ ವಿವರ (ಅನುಬಂಧ–01 ರಲ್ಲಿ ತಿಳಿಸಿದಂತೆ 3 ಸ್ಪರ್ಧಾ ವಿಭಾಗಗಳು) | ಬಹುಮಾನದ ವಿವರ | ತಗಲುವ ಮೊತ್ತ | ಒಟ್ಟು ಮೊತ್ತ |
|---|---|---|---|---|
| ಬಹುಮಾನ | ರಸ ಪ್ರಶ್ನೆ :–<br>3 ವಿಭಾಗಕ್ಕೆ ಪ್ರತಿ ತಾಲ್ಲೂಕಿಗೆ ರೂ,900ರಂತೆ 250 ತಾಲ್ಲೂಕಿಗೆ (3 x 900 x 250) | 1ನೇ ರೂ:400<br>2ನೇರೂ:300<br>3ನೇ ರೂ:200 | 6,75,000 | 16,87,500 |
| | ಪ್ರಬಂಧ ಕನ್ನಡ:–<br>3 ವಿಭಾಗಕ್ಕೆ ಪ್ರತಿ ತಾಲ್ಲೂಕಿಗೆ ರೂ,450ರಂತೆ 250 ತಾಲ್ಲೂಕಿಗೆ (3 x 450 x 250) | 1ನೇ ರೂ:200<br>2ನೇ ರೂ:150<br>3ನೇರೂ:100 | 3,37,500 | |
| | ಪ್ರಬಂಧ ಆಂಗ್ಲ:–<br>3 ವಿಭಾಗಕ್ಕೆ ಪ್ರತಿ ತಾಲ್ಲೂಕಿಗೆ ರೂ,450 ರಂತೆ 250 ತಾಲ್ಲೂಕಿಗೆ (3 x 450 x 250) | | 3,37,500 | |
| | ಭಿತ್ತಿಚಿತ್ರ ತಯಾರಿಕೆ:–<br>3 ವಿಭಾಗಕ್ಕೆ ಪ್ರತಿ ತಾಲ್ಲೂಕಿಗೆ ರೂ,450 ರಂತೆ 250 ತಾಲ್ಲೂಕಿಗೆ (3 x 450 x 250) | | 3,37,500 | |
| ಸ್ಪರ್ಧೆಗಳನ್ನು ಆಯೋಜಿಸಲು ಭತ್ಯೆ | 250 ತಾಲ್ಲೂಕುಗಳಲ್ಲಿ ಪ್ರತಿ ಸ್ಪರ್ಧೆಯನ್ನು ಆಯೋಜಿಸಲು ಒಬ್ಬ ವೀಕ್ಷಕರಿಗೆ ರೂ.500 ರಂತೆ 3 ವಿಭಾಗದ 4 ಸ್ಪರ್ಧೆಗಳನ್ನು ಆಯೋಜಿಸಲು (250 x 3 x 4 x 500) | | 15,00,000 | 48,37,500 |
| ಮೌಲ್ಯಮಾಪಕರ ಭತ್ಯೆ | 250 ತಾಲ್ಲೂಕುಗಳಲ್ಲಿ ಪ್ರತಿ ಸ್ಪರ್ಧೆಗೆ ಇಬ್ಬರು ಮೌಲ್ಯ ಮಾಪಕರಿಗೆ ತಲಾ ರೂ.500 ರಂತೆ 3 ವಿಭಾಗದ 4 ಸ್ಪರ್ಧೆಗಳನ್ನು ಆಯೋಜಿಸಲು (250 x 2 x 3 x 4 x 500) | | 30,00,000 | |
| ಬಹುಮಾನ ವಿಜೇತರಿಗೆ ಪ್ರಮಾಣ ಪತ್ರ | 250 ತಾಲ್ಲೂಕಿನಲ್ಲಿ ಪ್ರತಿ ವಿಭಾಗಕ್ಕೆ 15 ಪ್ರಮಾಣ ಪತ್ರಗಳಂತೆ ಸ್ಪರ್ಧೆಗಳ 3 ವಿಭಾಗಕ್ಕೆ ರೂ.30 ರಂತೆ ಮುದ್ರಣ ವೆಚ್ಚ (250 x 15 x3x 30) | | 3,37,500 | |
| | | | **ಒಟ್ಟು** | **65,25,000** |

# ಜಿಲ್ಲಾ ಮಟ್ಟ

| ವಿಷಯ | ಅನುದಾನದ ವಿವರ (ಅನುಬಂಧ–01 ರಲ್ಲಿ ತಿಳಿಸಿದಂತೆ 3 ಸ್ಪರ್ಧಾ ವಿಭಾಗಗಳು) | ಬಹುಮಾನದ ವಿವರ | ತಗಲುವ ಮೊತ್ತ | ಒಟ್ಟು ಮೊತ್ತ |
|---|---|---|---|---|
| ಬಹುಮಾನ | **ರಸ ಪ್ರಶ್ನೆ :–** 3 ವಿಭಾಗಕ್ಕೆ ಪ್ರತಿ ಜಿಲ್ಲೆಗೆ ರೂ, 2600 ರಂತೆ 34 ಜಿಲ್ಲೆಗಳಿಗೆ (3 x 2600x 34) | 1ನೇ ರೂ:1200<br>2ನೇ ರೂ:800<br>3ನೇ ರೂ:600 | 2,65,200 | 6,63,000/- |
| | **ಪ್ರಬಂಧ ಕನ್ನಡ:–**3 ವಿಭಾಗಕ್ಕೆ ಪ್ರತಿ ಜಿಲ್ಲೆಗೆ ರೂ, 1300 ರಂತೆ 34 ಜಿಲ್ಲೆಗಳಿಗೆ (3 x 1300x 34) | 1ನೇ ರೂ:600<br>2ನೇ ರೂ:400<br>3ನೇ ರೂ:300 | 1,32,600 | |
| | **ಪ್ರಬಂಧ ಆಂಗ್ಲ:–**3 ವಿಭಾಗಕ್ಕೆ ಪ್ರತಿ ಜಿಲ್ಲೆಗೆ ರೂ, 1300 ರಂತೆ 34 ಜಿಲ್ಲೆಗಳಿಗೆ (3 x 1300x 34) | | 1,32,600 | |
| | **ಬಿತ್ತಿಚಿತ್ರ ತಯಾರಿಕೆ:–**3 ವಿಭಾಗಕ್ಕೆ ಪ್ರತಿ ಜಿಲ್ಲೆಗೆರೂ,1300 ರಂತೆ 34 ಜಿಲ್ಲೆಗಳಿಗೆ(3 x 1300x 34) | | 1,32,600 | |
| ಸ್ಪರ್ಧೆಗಳನ್ನು ಆಯೋಜಿಸಲು ಪರಿವೀಕ್ಷಕರ ಭತ್ಯೆ | 34 ಜಿಲ್ಲೆಗಳಲ್ಲಿ ಪ್ರತಿ ಸ್ಪರ್ಧೆಯನ್ನು ಆಯೋಜಿಸಲು ಒಬ್ಬ ಪರಿವೀಕ್ಷಕರಿಗೆ ರೂ.500 ರಂತೆ 3 ವಿಭಾಗದ 4 ಸ್ಪರ್ಧೆಗಳನ್ನು ಆಯೋಜಿಸಲು (34 x 3 x 4 x 500) | | 2,04,000 | 6,57,900/- |
| ಮೌಲ್ಯಮಾಪಕರ ಭತ್ಯೆ | 34 ಜಿಲ್ಲೆಗಳಲ್ಲಿ ಪ್ರತಿ ಸ್ಪರ್ಧೆಯನ್ನು ಮೌಲ್ಯಮಾಪನ ಮಾಡಲು ಇಬ್ಬರು ಮೌಲ್ಯಮಾಪಕರಿಗೆ ತಲಾ ರೂ.500 ರಂತೆ 3 ವಿಭಾಗದ 4 ಸ್ಪರ್ಧೆಗಳನ್ನು ಆಯೋಜಿಸಲು (34 x 2 x 3 x 4 x 500) | | 4.08,000 | |
| ಬಹುಮಾನ ವಿಜೇತರಿಗೆ ಪ್ರಮಾಣ ಪತ್ರ | 34 ಜಿಲ್ಲೆಗಳಲ್ಲಿ ಪ್ರತಿ ವಿಭಾಗಕ್ಕೆ 15 ಪ್ರಮಾಣ ಪತ್ರಗಳಂತೆ 4 ಸ್ಪರ್ಧೆಗಳ 3 ವಿಭಾಗಕ್ಕೆ ರೂ.30 ರಂತೆ ಮುದ್ರಣ ವೆಚ್ಚ (34 x 15 x3x 30) | | 45,900 | |
| | | | ಒಟ್ಟು | **13,20,900** |

# ರಾಜ್ಯ ಮಟ್ಟ

| ವಿಷಯ | ಅನುದಾನದ ವಿವರ (ಅನುಬಂಧ-01 ರಲ್ಲಿ ತಿಳಿಸಿದಂತೆ 3 ಸ್ಪರ್ಧಾ ವಿಭಾಗಗಳು) | ಬಹುಮಾನದ ವಿವರ | ತಗಲುವ ಮೊತ್ತ | ಒಟ್ಟು ಮೊತ್ತ |
|---|---|---|---|---|
| ಪುಸ್ತಕಗಳು | **ರಸ ಪ್ರಶ್ನೆ:-** 1, 2 ಮತ್ತು 3ನೇ ಬಹುಮಾನ ತಲಾ ಇಬ್ಬರಿಗೆ **(ಪ್ರೌಢಶಾಲಾ ವಿಭಾಗಕ್ಕೆ ಮಾತ್ರ)** | 1ನೇ ರೂ:3000<br>2ನೇರೂ:2500<br>3ನೇರೂ:2000 | 7500 | 41,250/- |
| | **ಪ್ರಬಂಧ ಕನ್ನಡ:-** 1, 2 ಮತ್ತು 3ನೇಬಹುಮಾನ(3750*3) (3 ವಿಭಾಗಗಳಿಗೆ) | 1ನೇ ರೂ:1500<br>2ನೇ ರೂ:1250<br>3ನೇ ರೂ:1000 | 11,250 | |
| | **ಪ್ರಬಂಧ ಆಂಗ್ಲ:-** 1, 2 ಮತ್ತು 3ನೇ ಬಹುಮಾನ(3750*3) (3 ವಿಭಾಗಗಳಿಗೆ) | | 11,250 | |
| | **ಪೋಸ್ಟರ್ ಡಿಸೈನ್ (ಭಿತ್ತಿಚಿತ್ರ)ತಯಾರಿಕೆ:-** 1, 2 ಮತ್ತು 3ನೇ ಬಹುಮಾನ(3750*3) (3 ವಿಭಾಗಗಳಿಗೆ) | | 11,250 | |
| ಸ್ಪರ್ಧೆಗಳನ್ನು ಆಯೋಜಿಸಲು ಪರಿವೀಕ್ಷಕರ ಭತ್ಯೆ | ರಾಜ್ಯ ಮಟ್ಟದ ಸ್ಪರ್ಧೆಯನ್ನುಜಿಲ್ಲಾ ಮಟ್ಟದಲ್ಲಿ ಆಯೋಜಿಸಲುಒಬ್ಬ ಪರಿವೀಕ್ಷಕರಿಗೆ ರೂ.500 ರಂತೆ ಪರಿವೀಕ್ಷಕರ ಭತ್ಯೆ (34 x 500) | | 17,000 | 53,000/- |
| ರಾಜ್ಯ ಮಟ್ಟದ ಮೌಲ್ಯಮಾಪಕರ ಭತ್ಯೆ | ಪ್ರತಿ ಸ್ಪರ್ಧೆಯನ್ನುಮೌಲ್ಯ ಮಾಪನ ಮಾಡಲು ಇಬ್ಬರುಮೌಲ್ಯಮಾಪಕರಿಗೆ ತಲಾ ರೂ.500 ರಂತೆ 3 ವಿಭಾಗದ 4 ಸ್ಪರ್ಧೆಗಳ ಮೌಲ್ಯಮಾಪನ ಮಾಡಲು(3 x 4 x 2 x 500) | | 36,000 | |
| ಬಹುಮಾನ ವಿಜೇತರಿಗೆ ಪ್ರಮಾಣ ಪತ್ರ | ಬಹುಮಾನ ವಿಜೇತರಿಗೆ ಪ್ರಮಾಣಪತ್ರ ವಿತರಣೆ & ಪ್ರಮಾಣಪತ್ರ ಮುದ್ರಣ ವೆಚ್ಚ ಒಟ್ಟು 170 ಪ್ರಮಾಣ ಪತ್ರ x @ ರೂ.30 ರಂತೆ | | 5,100 | 5,100/- |
| | | | **ಒಟ್ಟು** | **99,350/-** |

| | |
|---|---|
| **ತಾಲ್ಲೂಕು ಮಟ್ಟದ ವೆಚ್ಚ** | 65,25,000 |
| **ಜಿಲ್ಲಾ ಮಟ್ಟದ ವೆಚ್ಚ** | 13,20,900 |
| **ರಾಜ್ಯ ಮಟ್ಟದ ವೆಚ್ಚ** | 99,350 |
| **ಇತರೆ ವೆಚ್ಚ** | 3,200 |
| **ಒಟ್ಟು ಮೊತ್ತ** | **79,48,450** |

**(ಕೂರ್ಮಾ ರಾವ್. ಎಂ)**
ಅಪರ ಮುಖ್ಯ ಚುನಾವಣಾಧಿಕಾರಿಗಳು
ಸಿ.ಆ.ಸು.ಇ (ಚುನಾವಣೆಗಳು)